ಅಧ್ಯಕ್ಷರು : ಮರಿಯನ್ನು ಒಪ್ಪಿಸಲಾಯಿತು. ಶ್ರೀ ನಾಗರಾಜ್‌ರವರೇ, ಈಗ ಹೇಳಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಹಳ್ಳಿಗಾಡಿನ ಜನತೆಗೆ ವಿದ್ಯುಚ್ಛಕ್ತಿಯನ್ನು ಒಂದು ದಿನಕ್ಕೆ 6 ಗಂಟೆ ಕಾಲ ನಿಲ್ಲಿಸಿರುವುದರ ಬಗ್ಗೆ ಪ್ರಸ್ತಾಪ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಹಳ್ಳಿಗಾಡಿನ ಜನತೆಗೆ ವಿದ್ಯುಚ್ಛಕ್ತಿಯನ್ನು ಒಂದು ದಿನಕ್ಕೆ ಆರು ಗಂಟೆ ಕಾಲ ನಿಲ್ಲಿಸಿದ್ದಾರೆ. ಈ ಪ್ರಕಾರ ನಿಲ್ಲಿಸಿರುವುದರಿಂದ ಗ್ರಾಮೀಣ....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ವಿಚಾರ. ಸಂಬಂಧಪಟ್ಟ ಮಂತ್ರಿಗಳು ಯಾರೂ ಕೂಡ ನಮಗೆ ಕಾಣುತ್ತಿಲ್ಲ, ಅವರು ಇಲ್ಲಿ ಇರಬೇಕಾದದ್ದು ಬಹಳ ಸೂಕ್ತ ಇದೆ.

ಅಧ್ಯಕ್ಷರು : ಅವರಿಗೆ ತಿಳಿಸಿಲ್ಲವಲ್ಲ?

ಶ್ರೀ ಸಿ. ಬೈರೇಗೌಡ : ನಿನ್ನೆ ಈ ವಿಚಾರ ಬಂದಿತ್ತು.

ಅಧ್ಯಕ್ಷರು : ಇವತ್ತು ಹೇಳುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೆ, ಅದರಂತೆ ಅವಕಾಶ ಕೊಟ್ಟಿದ್ದೇನೆ.

ಶ್ರೀ. ಕೆ.ಎಸ್. ಈಶ್ವರಪ್ಪ : ಆದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಸಿ. ಬೈರೇಗೌಡ : ನಾವು ಸುಮ್ಮನೆ ಹೇಳಿಹೋಗುವುದಕ್ಕೆ ಏಕೆ ಈ ಸಭೆಗೆ ಬರಬೇಕು? ಮುಖ್ಯವಾಗಿ ಹಳ್ಳಿಗಾಡಿನ ಜನತೆಗೆ ಅನುಕೂಲವಾಗಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಅವರಿಗೆ ತಿಳಿಸುತ್ತೇವೆ.

ಶ್ರೀ ಸಿ. ಬೈರೇಗೌಡ : ಇದು ಬಹಳ ತೀವ್ರವಾದ ಸಮಸ್ಯೆ. ತತ್‌ಕ್ಷಣ ಇದನ್ನು ಸರಿಪಡಿಸುತ್ತೇವೆ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅವರು ಹೇಳಬೇಕಾಗುತ್ತದೆ. ತಾವು ಇದನ್ನು ಹೇಳುವುದಕ್ಕೆ ಅಪ್ಪಣೆ ಕೊಡಿಸಿದ್ದೀರಿ, ಸಂತೋಷ. ಬರೇ ಹೇಳಬೇಕು ಎನ್ನುವ ಕಾರಣಕ್ಕಾಗಿ ಹೇಳುವುದಕ್ಕೆ ನಾವು ತಯಾರಿಲ್ಲ, ಅದಕ್ಕಿಂದ ಹೆಚ್ಚಾಗಿ ಕ್ರಮ ತೆಗೆದುಕೊಳ್ಳಬೇಕಾದದ್ದು ನಮಗೆ ಮುಖ್ಯ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ಕಡೆಯಿಂದ ಮಂತ್ರಿಗಳು ಇದ್ದಾರೆ. ಯಾರು ಸಚಿವರು ಇಲ್ಲಿದ್ದಾರೆ. ಅವರು ಉತ್ತರ ಕೊಟ್ಟರೆ ನಮ್ಮ ಅಭ್ಯಂತರ ಇಲ್ಲ. ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡತಕ್ಕದ್ದು ಏನೆಂದರೆ, ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಆರಾರು ಗಂಟೆ ವಿದ್ಯುಚ್ಛಕ್ತಿ ನಿಲ್ಲಿಸಿರುವುದರಿಂದ ಬರೇ ನನ್ನ ಒಂದು ತಾಲ್ಲೂಕಿನಲ್ಲೇ ಒಂದು ಕೋಟಿ ರೂಪಾಯಿ ಬೆಳೆ ನಷ್ಟವಾಗುತ್ತಿದೆ. ಇಡೀ ಕರ್ನಾಟಕದಲ್ಲಿ ಈ ರೀತಿ ಆಗತಕ್ಕಂಥ ನಷ್ಟ ಸುಮಾರು ನೂರಾರು ಕೋಟಿ ಬೆಳೆ ನಷ್ಟ ಆಗುವಂಥ ಪರಿಸ್ಥಿತಿ ಉದ್ಭವವಾಗುತ್ತದೆ. ವಿದ್ಯುಚ್ಛಕ್ತಿ ಮಂಡಳಿಯವರು ಗ್ರಾಮಾಂತರ ಪ್ರದೇಶಗಳಿಗೆ ಒಂದು ರೀತಿಯ ಗಧಾ ಪ್ರಹಾರ ಮಾಡುವುದಕ್ಕೆ ಹೊರಟಿರುವುದು ಸರಿಯಲ್ಲ. ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ನಿಲುಗಡೆಯನ್ನು ರದ್ದುಮಾಡಿ ಮೊದಲು ಹೇಗೆ ಇತ್ತು, ಆ ಪ್ರಕಾರವೇ